## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 280

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 06.12.2023

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಂದಾಯ ಇಲಾಖೆಯಲ್ಲಿ ಅಕ್ರಮ ಸಾಗುವಳಿದಾರರ ಜಮೀಮ ಸಕ್ರಮಗೊಳಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆಯೇ ತಂದಿದ್ದಲ್ಲಿ, ಈ ಯೋಜನೆಯನ್ನು ಸದುಪಯೋಗ ಮಾಡಿಕೊಳ್ಳುವ ಫಲಾನುಭವಿಗಳ ಆಯ್ಕೆಯ ಮಾನದಂಡವೇನು | ಸರ್ಕಾರಿ ಜಮೀನುಗಳಲ್ಲಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ, 94-ಬಿ, 94-ಎ(4)ರಡಿ ಕ್ರಮವಾಗಿ ನಮೂನೆ-50, 53 ಮತ್ತು 57ರಡಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಈ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 45 ಎಲ್.ಜಿ.ಪಿ. 2023, ದಿನಾಂಕ: 01.12.2023ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.<br><br>ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108 (ಎಫ್) ರನ್ವಯ ಅರ್ಜಿದಾರನು ಈ ಕೆಳಕಂಡ ಅರ್ಹತೆಯನ್ನು ಹೊಂದಿರತಕ್ಕದ್ದು.<br>1.ಅನಧಿಕೃತವಾಗಿ ಸಾಗುವಳಿ ಮಾಡುವ ಅವಧಿಗೆ ಅರ್ಜಿದಾರನಿಗೆ 18 ವರ್ಷವಾಗಿರಬೇಕು;<br>2.ಅವನು ಭೂಮಿಯು ಇರುವ ಅಥವಾ ಪಕ್ಕದಲ್ಲಿರುವ ತಾಲ್ಲೂಕಿನಲ್ಲಿ ತಾಲ್ಲೂಕಿನ ಪರಿಮಿತಿಯೊಳಗೆ ಖಾಯಂ ನಿವಾಸಿಯಾಗಿರಬೇಕು;<br>3.ಅವನು ಖುದ್ದಾಗಿ ಸಾಗುವಳಿ ಮಾಡುತ್ತಿರಬೇಕು ಮತ್ತು ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಉಪಬಂಧಗಳ ಮೇರೆಗೆ ಭೂಮಿಯನ್ನು ಹೊಂದುವುದು ಮತ್ತು ಪಡೆಯುವುದರಿಂದ ನಿಷಿದ್ಧನಾಗತಕ್ಕದ್ದಲ್ಲ;<br>4.ನಮೂನೆ-50 ಮತ್ತು 53ರ ಅರ್ಜಿಗಳನ್ನು ಪರಿಗಣಿಸುವಾಗ ಅರ್ಜಿದಾರನು ಹದಿನಾಲ್ಕನೇ ಏಪ್ರಿಲ್ 1990ರ ದಿನಕ್ಕೆ ಕಡೆಯಪಕ್ಷ ಹಿಂದಿನ ಮೂರು ವರ್ಷಗಳು ಕಡಿಮೆಯಿಲ್ಲದ ಅವಧಿಯ ನಿರಂತರ ಭೂಮಿಯ ಅನಧಿಕೃತ ಅಧಿಭೋಗನಾಗಿರಬೇಕು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 5.ನಮೂನೆ-57ರಲ್ಲಿ ಅರ್ಜಿಸಲ್ಲಿಸುವಾಗ 2005ರ ಜನವರಿ ಮೊದಲ ದಿನಕ್ಕೆ ಮೂರು ವರ್ಷಕ್ಕಿಂತ ಕಡಿಮೆಯಿಲ್ಲದ ಅವಧಿಯವರೆಗೆ ನಿರಂತರ ಅರ್ಜಿಸಲ್ಲಿಸಿದ ಅರ್ಜಿದಾರರು ಅನಧಿಕೃತ ಅಧಿಭೋಗನಾಗಿರಬೇಕು.<br>6.ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಅಂಥ ಅವಧಿಯು ಒಂದು ವರ್ಷಕ್ಕಿಂತ ಕಡಿಮೆಯಿರತಕ್ಕದ್ದಲ್ಲ. |
| ಆ | ಅರಣ್ಯ ಪ್ರದೇಶದಲ್ಲಿ ಆಕ್ರಮವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಕ್ರಮ ಮಾಡಲಾಗುವುದೇ ಇಂತಹ ಎಷ್ಟು ಅರ್ಜಿಗಳು ಸರ್ಕಾರದ ಮುಂದಿವೆ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಇದಕ್ಕೆ ವಿಧಿಸಲಾದ ದಂಡದ ಪ್ರಮಾಣ ಎಷ್ಟು (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಇ | ಪಟ್ಟಾ ಜಮೀನಿನಲ್ಲಿ ಮನೆ ನಿರ್ಮಿಸಿಕೊಂಡವರಿಗೆ ಈ ಯೋಜನೆಯಡಿಯಲ್ಲಿ ಸಕ್ರಮಗೊಳಿಸುವ ಸಂಬಂಧ ವಿಧಿಸಲಾಗುವ ದಂಡ ಎಷ್ಟು ಕಳೆದ ಐದು ವರ್ಷಗಳಲ್ಲಿ ಅಂತಹ ಎಷ್ಟು ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| ಈ | ಈ ಯೋಜನೆ ಸಂಬಂಧವಾಗಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳು ಇತ್ಯರ್ಥಗೊಂಡಿವೆಯೇ ಇಲ್ಲದಿದ್ದಲ್ಲಿ ಅಂತಹ ಎಷ್ಟು ಪ್ರಕರಣಗಳು ಯಾವ ಯಾವ ನ್ಯಾಯಾಲಯಗಳಲ್ಲಿ ಯಾವ ಹರಿತದಲ್ಲಿ ಬಾಕಿ ಉಳಿದುಕೊಂಡಿವೆ: (ಸಂಪೂರ್ಣ ಮಾಹಿತಿ ನೀಡುವುದು | ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-3ರಲ್ಲಿ ನೀಡಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| ಉ | ಮೋಜಣಿ ಇಲಾಖೆಯಡಿ ಪೋಡಿ ಹದ್ದುಬಸ್ತು, ಇ-ಸ್ವತ್ತು ಸ್ಕೆಚ್ ಮುಂತಾದ ಅರ್ಜಿಗಳು ವರ್ಷಗಟ್ಟಲೇ ವಿಲೇವಾರಿಯಾಗದೇ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ | ಸರ್ಕಾರದ ಗಮನಕ್ಕೆ ಬಂದಿದೆ. |
| ಊ | ಹಾಗಿದ್ದಲ್ಲಿ ಈ ವಿಳಂಬಕ್ಕೆ ಕಾರಣವಾದ ಸಿಬ್ಬಂದಿ ಕೊರತೆ ಮತ್ತು ತಾಂತ್ರಿಕ ದೋಷದಂತಹ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ಮಾಹಿತಿ ನೀಡುವುದು) | 1. ಈಗಾಗಲೇ 2021ನೇ ಸಾಲಿನಲ್ಲಿ 1514 ಮತ್ತು 2022ನೇ ಸಾಲಿ ನಲ್ಲಿ 1519 ಪರವಾನಗಿ ಭೂಮಾಪಕರುಗಳನ್ನು ನೇಮಕಾತಿ ಮಾಡಿ ಕೊಂಡಿದ್ದು. ಹಾಗೂ 2023ನೇ ಸಾಲಿ ನಲ್ಲಿ 2000 ಪರವಾನಗಿ ಭೂಮಾಪರುಗಳ ನೇಮಕಾತಿ ಕುರಿತು ಅರ್ಜಿ ಆಹ್ವಾನಿಸಿ ಅರ್ಹ 1405 ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡು ವೃತ್ತಿ ಬುನಾದಿ ತರಬೇತಿ ನೀಡ ಲಾಗುತ್ತಿದೆ. ಈ ಭೂಮಾಪಕರನ್ನು ಜನವರಿ 2024 ರ ಮಾಹೆಯಿಂದ ಅಡವಿ ಕೆಲಸಕ್ಕೆ ನೇಮಿಸಲಾಗುವುದು.<br>2. ಇಲಾಖೆಯಲ್ಲಿ 364 ಭೂಮಾಪಕರ ಹುದ್ದೆ ಭರ್ತಿ ಮಾಡಿ ಕೊಳ್ಳುವ ಕುರಿತು ಸರ್ಕಾರದ ಅನುಮತಿ ಪಡೆದಿದ್ದು, ನಿಯಮಾನುಸಾರ ಖಾಲಿ ಹುದ್ದೆ ಭರ್ತಿ ಕುರಿತು ಕ್ರಮ ಕೈಗೊಳ್ಳ ಲಾಗುತ್ತಿದೆ.<br>3. ಕಡಿಮೆ ಪ್ರಕರಣಗಳು ಬಾಕಿಯಿರುವ ತಾಲ್ಲೂಕುಗಳಿಂದ ಹೆಚ್ಚಿನ ಪ್ರಕರಣಗಳು ಬಾಕಿಯಿರುವ ತಾಲ್ಲೂಕಿಗೆ ಭೂಮಾಪಕರುಗಳನ್ನು ನಿಯೋಜಿಸಿ ಶೀಘ್ರ ವಿಲೇ ವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ತಾಂತ್ರಿಕ ಸಮಸ್ಯೆಯಿರುವ ಬಗ್ಗೆ ಒಂದಾವರ್ತಿ ಸಮಸ್ಯೆ ಯನ್ನು ಬಗೆಹರಿಸಲಾಗಿರುತ್ತದೆ. ಹಾಗೂ ತಾಂತ್ರಿಕ ಸಮಸ್ಯೆಗಳ ಪರಿಹರಿಸುವ ಕುರಿತು ಕೇಂದ್ರ ಕಛೇರಿ ಪಿ.ಎಂ.ಯು ಘಟಕದಲ್ಲಿ ಪ್ರತ್ಯೇಕ ತಂಡವನ್ನು ನೇಮಿಸ ಲಾಗಿದ್ದು, ತಾಂತ್ರಿಕ ಸಮಸ್ಯೆಗಳ ಬಗ್ಗೆ ಮನವಿಗಳು ಸ್ವೀಕೃತಿಯಾದಲ್ಲಿ ಕೂಡಲೆ ಸಮಸ್ಯೆಗಳನ್ನು ಬಗೆಹರಿಸ ಲಾಗುತ್ತಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಋ | ರಾಜ್ಯದಲ್ಲಿ ಉಪನೋಂದಣಿ ಕಛೇರಿಗಳ ಮೇಲೆ ತುಂಬಾ ಒತ್ತಡಗಳಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ನೂತನವಾಗಿ ರಚನೆಯಾಗಿರುವ ಎಲ್ಲಾ ಹೊಸ ತಾಲ್ಲೂಕುಗಳಲ್ಲಿ ಉಪ ನೋಂದಣಾಧಿಕಾರಿ ಕಛೇರಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ (ಮಾಹಿತಿ ನೀಡುವುದು! | ಪ್ರಸ್ತುತ ನೂತನ ಜನಸ್ನೇಹಿ ಕಾವೇರಿ-2.0 ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ರಾಜ್ಯದ ಎಲ್ಲಾ ಉಪ ನೋಂದಣಿ ಕಛೇರಿಗಳಲ್ಲಿ ಅಳವಡಿಸಿ ಜಾರಿಗೆ ತರಲಾಗಿದೆ. ಕಾವೇರಿ-2.0 ತಂತ್ರಾಂಶದಲ್ಲಿ ಸಾರ್ವಜನಿಕರೇ ನೋಂದಾಯಿಸಿರುವ ಸಂಬಂಧಿಸಿದಂತೆ ಡೇಟಾವನ್ನು ನಮೂದಿಸಿ ನೋಂದಣಿಯ ಶುಲ್ಕವನ್ನು ಪರಿಶೀಲಿಸಿ ಮತ್ತು ದಸ್ತಾವೇಜುಗಳ ನೋಂದಣಿಯ ಸಮಯವನ್ನು ನಿಗಧಿಪಡಿಸಿಕೊಳ್ಳಬಹುದಾಗಿದ್ದು, ಆನ್ ಲೈನ್ ಮೂಲಕ ನೋಂದಣಿ ಸೇವೆಯನ್ನು ಸಾರ್ವಜನಿಕರು ಪಡೆದುಕೊಳ್ಳುತ್ತಿರುತ್ತಾರೆ. ಇದರಿಂದ ಉಪ ನೋಂದಣಿ ಕಛೇರಿಯಲ್ಲಿ ದಸ್ತಾವೇಜಿನ ಡೇಟಾ ನಮೂದಿಸುವುದು ಇರುವುದಿಲ್ಲ.<br><br>ನೂತನವಾಗಿ ರಚನೆಯಾಗಿರುವ ತಾಲ್ಲೂಕುಗಳ ಪೈಕಿ ಕಾಗವಾಡ ಉಪ ನೋಂದಣಿ ಕಛೇರಿಗೆ ಗ್ರಾಮಗಳನ್ನು ನೋಂದಣಿ ಕಾಯ್ದೆ 1908ರನ್ವಯ ವ್ಯಾಪ್ತಿ ನಿಗಧಿಪಡಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ / 215 / ಎಂಎನ್ಎ/2023, ದಿನಾಂಕ:27.11.2023 ರಂದು ಅಧಿಸೂಚನೆ ಹೊರಡಿಸಲಾಗಿದೆ.<br><br>ನೂತನವಾಗಿ ರಚನೆಯಾಗಿರುವ ತಾಲ್ಲೂಕುಗಳಲ್ಲಿ ಹೊಸದಾಗಿ ಉಪ ನೋಂದಣಿ ಕಛೇರಿಗಳನ್ನು ಪ್ರಾರಂಭಿಸಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದ್ದು, ಆರ್ಥಿಕ ಇಲಾಖೆಯು ಉಪ ನೋಂದಣಿ ಕಛೇರಿಗಳಲ್ಲಿ ವಾರ್ಷಿಕವಾಗಿ ರೂ. 4.00 ಕೋಟಿಗಳಿಗಿಂತ ಕಡಿಮೆ ರಾಜಸ್ವ ಸಂಗ್ರಹಣೆಯಾಗುತ್ತಿರುವುದರಿಂದ, ಹೊಸ ಕಛೇರಿಗಳನ್ನು ಪ್ರಾರಂಭಿಸುವ ಬದಲಾಗಿ, ಪ್ರಸ್ತುತ ಇರುವ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಿಯಾಗುವ ದಾಖಲೆಗಳ ಸಂಖ್ಯೆ / ಆದಾಯ / ವಹಿವಾಟುಗಳ ಸಂಖ್ಯೆ / ಇತ್ಯಾದಿಗಳ ವಿಶ್ಲೇಷಣೆ ನಂತರ ಕಡಿಮೆ ನೋಂದಣಿಯಾಗುವ ದಾಖಲೆಗಳ ಸಂಖ್ಯೆ / ಆದಾಯ / ವಾಹಿವಾಟುಗಳ ಸಂಖ್ಯೆ ಇರುವಂತಹ ಕಛೇರಿಗಳನ್ನು ಗುರುತಿಸಿ, ಎಲ್ಲಾ ಉಪ ನೋಂದಣಿ ಕಛೇರಿಗಳಲ್ಲಿ ನೋಂದಣಿಯಾಗುವ ದಾಖಲೆಗಳ ಸಂಖ್ಯೆ / ವಹಿವಾಟುಗಳ ಸಂಖ್ಯೆ ಮತ್ತು ಕೆಲಸದ ಹೊರೆಗೆ ಅನುಗುಣವಾಗಿ ಹುದ್ದೆಗಳನ್ನು ಮತ್ತು ಕಛೇರಿಗಳನ್ನು ಸ್ಥಳಾಂತರಗೊಳಿಸಿ, ತರ್ಕಬದ್ಧಗೊಳಿಸಲು ಆರ್ಥಿಕ ಇಲಾಖೆಯು ತಿಳಿಸಿದ್ದು, ಅದರಂತೆ ಕ್ರಮ ವಹಿಸಲು ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಇವರಿಗೆ ತಿಳಿಸಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಎ | ರಾಜ್ಯದಲ್ಲಿರುವ ಪರವಾನಿಗೆ ಭೂಮಾಪಕರ ಸಂಖ್ಯೆ ಎನ್ನು ಈ ಭೂಮಾಪಕರ ನೇಮಕಕ್ಕೆ "ಇರುವ ವಿದ್ಯಾರ್ಹತೆ ಅಥವಾ ಮಾನದಂಡವೇನು ಮತ್ತು ಅವರಿಗೆ ನೀಡಲಾಗುವ ಮಾಸಿಕ ವೇತನ ಎಷ್ಟು ಹಾಗೂ ಆ ಭೂಮಾಪಕರನ್ನು ಖಾಯಂ ಮಾಡುವ ಕುರಿತು ಸರ್ಕಾರದ ಹಂತದಲ್ಲಿ ಚಿಂತನೆ ಇದೆಯ? (ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 3677 ಪರವಾನಿಗೆ ಭೂಮಾಪಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ.<br><br>ಪರವಾನಗಿ ಭೂಮಾಪಕರ ನೇಮಕಾತಿಗೆ ಇರುವ ವಿದ್ಯಾರ್ಹತೆಗಳು-<br><br>ಕರ್ನಾಟಕ ಭೂಕಂದಾಯ ನಿಯಮಾವಳಿಗಳು 1966 ರ ನಿಯಮ 46 (ಎ) ರಂತೆ<br><br>• ಕನಿಷ್ಟ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ.) ಅಥವಾ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ ಜರುಗಿಸುವ 12ನೇ ತರಗತಿ ಸಿ.ಬಿ.ಎ ಸ್.ಇ. ಅಥವಾ ಐ.ಸಿ.ಎಸ್.ಇ. ಇವುಗಳಲ್ಲಿ ವಿಜ್ಞಾನ ವಿಷಯ ವನ್ನು ಪಡೆದು ಗಣಿತ ವಿಷಯದಲ್ಲಿ 60% ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು<br>• ಅಥವಾ ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿತವಾದ ಯಾವುದೇ ವಿಶ್ವ ವಿದ್ಯಾಲಯದಲ್ಲಿ ಬಿ.ಇ(ಸಿವಿಲ್)/ ಅಥವಾ ಬಿ.ಟೆಕ್(ಸಿವಿಲ್)/ಅಥವಾ ಸಿವಿಲ್ ಇಂಜಿನೀಯ ರಿಂಗ್ ಡಿಪ್ಲೋಮಾದಲ್ಲಿ ಉತ್ತೀರ್ಣರಾಗಿರಬೇಕು.<br>• ಕರ್ನಾಟಕ ರಾಜ್ಯ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ "ಲ್ಯಾಂಡ್ ಅಂಡ್ ಸಿಟಿ ಸರ್ವೆ" ಯಲ್ಲಿ ಪದವಿ ಪೂರ್ವ ಡಿಪ್ಲೋಮಾ ದಲ್ಲಿಉತ್ತೀರ್ಣರಾಗಿರ ಬೇಕು<br>• ಅಥವಾ ಕರ್ನಾಟಕ ಸರ್ಕಾರದ ಉದ್ಯೋಗ ಹಾಗೂ ತರಬೇತಿ ಇಲಾಖೆ ನಡೆಸುವ ಐ.ಟಿ.ಐ. ಇನ್.ಸರ್ವೆ ಟ್ರೇಡ್. ನಲ್ಲಿ ಉತ್ತೀರ್ಣರಾಗಿರಬೇಕು<br>• ಅಥವಾ ರಾಜ್ಯ ಸರ್ಕಾರದ ಭೂಮಾಪನ ಕಂದಾಯ ವ್ಯವಸ್ಥೆ & ಭೂದಾಖಲೆಗಳ ಇಲಾಖೆಯಲ್ಲಿ ಅಥವಾ ಸರ್ವೆ ಆಫ್ ಇಂಡಿಯಾ ಅಥವಾ ಸರ್ಕಾರಿ ವಲಯಕ್ಕೆ ಒಳಪಟ್ಟ ಸಂಸ್ಥೆಗಳಲ್ಲಿಅಥವಾ ಖಾಸಗಿ ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷಗಳ ಭೂಮಾಪನ ಸೇವೆ ಸಲ್ಲಿಸಿ ನಿವೃತ್ತ ರಾಗಿರುವವರು.<br><br>ಪರವಾನಗಿ ಭೂಮಾಪಕರ ವೇತನ :-ಸರ್ಕಾರದ ಆದೇಶ ಸಂಖ್ಯೆ-ಕಂಇ 238 ಎಸ್ ಎಸ್ ಸಿ 2021, ದಿನಾಂಕ-10-01-2022 ರನ್ವಯ ಪರವಾನಗಿ ಭೂಮಾಪಕರು ಪೂರ್ಣ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಪ್ರಮಾಣದಲ್ಲಿ ಅಪ್ ಲೋಡ್ ಮಾಡಿ ಇತ್ಯರ್ಥ ವಾದ ಪ್ರತಿ ಅರ್ಜಿಗೆ ಎರಡು ಬ್ಲಾಕ್.ವರೆಗೆ ರೂ.1200/- ಮತ್ತು ಎರಡಕ್ಕಿಂತ ಹೆಚ್ಚಿನ ಬಹುಮಾಲೀಕತ್ವದ ಹಿಸ್ಸಾ ಬ್ಲಾಕ್ ವಿಂಗಡಿಸಿರುವ ಪ್ರತಿ ಹೆಚ್ಚುವರಿ ಬ್ಲಾಕ್.ಗೆ 200/- ರಂತೆ ದಿನಾಂಕ:15-01-2022 ರಿಂದ ಅನ್ವಯವಾಗುವಂತೆ ಪರವಾನಗಿ ಭೂಮಾಕರುಗಳಿಗೆ ಸೇವಾ ಶುಲ್ಕವನ್ನು ನಿಗಧಿ ಪಡಿಸಲಾಗಿದೆ<br><br>ಪರವಾನಗಿ ಭೂಮಾಪಕರನ್ನು ಖಾಯಂ ಮಾಡುವ ಕುರಿತು:-ಪರವಾನಗಿ ಭೂಮಾಪಕರುಗಳು ತಮ್ಮನ್ನು ಖಾಯಂಗೊಳಿಸುವ ಕುರಿತು ಈ ಕಛೇರಿಗೆ ಮನವಿ ಸಲ್ಲಿಸಿ ದಂತೆ ಪರಿಶೀಲಿಸಿ ಈ ಕಛೇರಿ ಪತ್ರ ಸಂಖ್ಯೆ: SSLR/PMU/ 13011/245/ 2023, ದಿನಾಂಕ: 12-09-2023 ರ ಪತ್ರದಲ್ಲಿ ಈ ಬಗ್ಗೆ ಸರ್ಕಾರಕ್ಕೆ ನಿರ್ದೇಶನ ನೀಡಲು ಕೋರಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ: ಕಂಇ 157 ಎಸ್.ಎಸ್ ಸಿ 2023, ದಿನಾಂಕ: 08-11-2023 ರಲ್ಲಿ ಪರವಾನಗಿ ಭೂಮಾಪಕರನ್ನು ಭೂಮಾಪನ ಇಲಾಖೆಯಲ್ಲಿ ವಿಲೀನಗೊಳಿಸುವ ಕುರಿತಂತೆ ಭೂಮಾಪನ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು 10 ವರ್ಷಗಳ ಕಾಲ ನಿರಂತರವಾಗಿ ಸೇವೆ ಸಲ್ಲಿಸಿ ಸರ್ಕಾರ ದಿಂದ ವೇತನ ಭತ್ಯೆಗಳನ್ನು ಪಡೆದಿದ್ದಲ್ಲಿ ಮಾತ್ರ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುತ್ತದೆ. ಆದರೆ ಪರವಾನಗಿ ಭೂಮಾಪಕರನ್ನು ಯಾವುದೇ ಖಾಲಿ ಹುದ್ದೆಗೆ ನೇಮಕ ಮಾಡಿಕೊಂಡಿರುವುದಿಲ್ಲ. ಸಂಚಿತ ನಿಧಿ ಯಿಂದಾಗಲಿ, ಸರ್ಕಾರದ ಅನುದಾನದಿಂದಾಗಲಿ ಇವರಿಗೆ ವೇತನ ಪಾವತಿಸಿ ರುವುದಿಲ್ಲ. ಅರ್ಜಿದಾರರಿಂದ ಸ್ವೀಕೃತವಾ ಗುವ ಶುಲ್ಕದಲ್ಲಿ ಕಾಲಕಾಲಕ್ಕೆ ನಿಗಧಿಪಡಿಸಿದ ಮೊತ್ತವನ್ನು ಪಾವತಿಸಲಾ ಗುತ್ತಿದೆ. ಹಾಗೂ ಪರವಾನಗಿ ನೀಡುವಾಗ ಇದು ಯಾವುದೇ ಸರ್ಕಾರಿ ಸೇವೆಗೆ ಪೂರಕವಲ್ಲವೆಂದು ಸ್ಪಷ್ಟ ಪಡಿಸಲಾಗಿದೆ. ಅಲ್ಲದೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀಮತಿ ಉಮಾದೇವಿ ಪ್ರಕರಣದನ್ವಯ ಪರವಾನಗಿ ಭೂಮಾಪಕರನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲವೆಂದು ನಿರ್ದೇಶನ ನೀಡಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 129 ಎಲ್‌ಜಿಕ್ಯೂ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು